ಜೋರಾಗಿ ಬೀಸಿದ ಗಾಳಿಯಿಂದಾಗಿ ಎದ್ದ ದೂಳು ಅವಳ ಕಣ್ಣೊಳಗೆ ತುಂಬಿಕೊಂಡಿತು, ಕೂದಲೆಲ್ಲ ಕೆದರಿಕೊಂಡಿತು. ಅವಳು ಅವಳನ್ನ ಸುಧಾರಿಸಿಕೊಳ್ಳುವಷ್ಟರಲ್ಲಿ ಜೋರಾಗಿ ಓಡಿ ಬಂದ ಲೋಕಮಾನ್ ಗೇಟು ದಾಟಿ ಮೆಟ್ಟಿಲು ಹತ್ತಿ ಜಗಲಿಯಲ್ಲಿ ಬಂದು ನಿಂತ್ಕೊಂಡ.

ಹಾಗಿಲ್ಲ, ಅವಳಿಗೆ ಬಿಚ್ಚಿ ನೋಡುವ ಆಸೆಯೂ ಇಲ್ಲ. ಬಿಚ್ಕೋ ಹಾಗಿದ್ರೆ ಆ ಪೊಟ್ಟಣಾನ ನೀರಿನ ಗುಂಡಿಯೊಳಗೆ ಎಸೆದುಬಿಡುತ್ತಿದ್ದಳು! ಅವಳ ಸುತ್ತಲೂ ಸುರಿಯುವ ಮಳೆಯಂತೆ ವಿಷಣ್ಣತೆ ಆವರಿಸಿಕೊಂಡಿತು.

ದಿನಗಳುರುಳಿದವು. ಅವಳು ಅಮ್ಮನಾಗೋಕೆ ಆಗಲಿಲ್ಲ. ಒಳಗೆ ದೇಹ ನರಳ್ತಾಯಿದೆ. ಮೂಳೆಗಳಿಂದ ನೋವಿನ ನರಳಿಕೆ ಕೇಳಿಸ್ತಾಯಿದೆ. ನಾಲ್ಕೂ ದಿಕ್ಕಿಗೆ ಬರೀ ಶೂನ್ಯ. ಸೂಳೆಮನೆಲೀ ಅಬೂಲ್ ಆರಾಮಾಗಿದಾನೆ. ಮೊತಿಜಾನಳ ಔದಾಸೀನ್ಯ, ಬೇಸರ ಯಾವತ್ತೂ ಹೋಗಲ್ಲ.

ಗುಲ್ನೂರ್ ಸದಾ ಹಂಗಿಸ್ತಾಳೆ, 'ನಿಂಗ್ಯಾಕೆ ಮಕ್ಕಳಾಗಿಲ್ಲ?'

ಮೊತಿಜಾನ್ ಅವಾಕ್ಕಾಗಿ ಅತ್ತೆಯನ್ನ ನೋಡ್ತಾಳೆ. ಈ ಪ್ರಶ್ನೆಗೆ ಏನು ಉತ್ತರವಿದೆ? ಒಂದು ಸಲ ಹೇಳ್ಬೇಕು ಅನಿಸುತ್ತೆ, ನಿನ್ನ ಮಗನ್ನ ಯಾಕೆ ಕೇಳೋದಿಲ್ಲ ನೀನು? ಆದರೆ, ಕೂಡಲೇ ತನ್ನನ್ನ ನಿಯಂತ್ರಿಸಿಕೊಳ್ತಾಳೆ. ಯಾವ ಉತ್ತರವನ್ನೂ ನೀಡದೆ ತಲೆ ತಗ್ಗಿಸಿ ಕೆಲಸ ಮಾಡೋಕೆ ಶುರು ಮಾಡ್ತಾಳೆ. ಹಿಂದಿನಿಂದ ಅತ್ತೆಯ ಜೋರು ಗಂಟಲು ಕೇಳಿಸುತ್ತೆ, 'ನಮ್ಮನೆ ದೀಪ ಬೆಳಗೋರು ಯಾರು? ಓ ಅಲ್ಲಾಹು!'

ಈ ಮಾತು ಕೇಳಿದರೆ ಮೊತಿಜಾನ್‌ಗೆ ಮೈಯೆಲ್ಲ ಬೆಂಕಿ ಹೊತ್ಕೊಂಡಂಗಾಗುತ್ತೆ. ಧಪ್ ಅಂತ ಕಾಲ್ದಾಕಿ ತಿರುಗಿ ನಿಂತ್ಕೊಂಡಳು. ನೋಡಿದರೆ ಅತ್ತೆ ಹಿಂಬಾಗಿಲಿಂದ ಪಕ್ಕದ ಮನೆಗೆ ಹೋಗ್ತಾಯಿದ್ಲು. ಅವಳಿಗೆ ತಲೆ ಧಿಂ ಧಿಂ ಅಂತಾಯಿತ್ತು. ವಾಪಸು ಬಂದು ಜಗಲಿಯಲ್ಲಿ ಕೂತ್ಕೊಂಡಳು. ಅವಳಿಗೆ ಗೊತ್ತಾಯ್ತು, ಈಗ ಅತ್ತೆ ತನ್ನನ್ನ ಬಂಜೆ ಅಂತ ಸಾಧಿಸ್ತಾಳೆ. ಪೂರಾ ಮೈ ನಿಸ್ತೇಜವಾದಂತೆನಿಸಿತು. ಕಣ್ಣಲ್ಲಿ ನೀರು ತುಂಬ್ಕೊಂಡ್ತು. ಯಾಕೆ ತನಗೆ ಮಕ್ಕಳಾಗಿಲ್ಲ?

ಬುಧೇ ಬಂದು ಅವಳೆದುರು ನಿಂತ. ಅಂಗಿಯೊಳಗೆ ತುಂಬಾ ನೇರಳೆಹಣ್ಣುಗಳನ್ನು ತುಂಬ್ಕೊಂಡು ತಂದಿದ್ದ, 'ಭಾಬಿ, ತಿನ್ನು. ನೋಡು ಎಷ್ಟೊಂದು ನೇರಳೆಹಣ್ಣು!'

ಮೊತಿಜಾನ್ ಸುಮ್ಮನೆ ಬುಧೇನ ನೋಡಿದಳು, ಮಾತಾಡಲಿಲ್ಲ. ಬುಧೇ ಕೇಳಿದ, 'ಅಮ್ಮ ಬೈದಿದಾಳೆ ಅಲ್ವಾ?'

ಅವಳು ಉತ್ತರಿಸಲಿಲ್ಲ. ಅವನನ್ನ ತಬ್ಕೊಂಡು ಅಳಬೇಕು ಅನ್ನಿಸ್ತು. ಬುಧೇಗಂತೂ ಹೇಳೋಕಾಗಲ್ಲ. ಅತ್ತೆಯ ಕೆಟ್ಟತನದಿಂದ ಅವಳಿಗೆ ಬೇಜರಾಗಿಲ್ಲ. ಅವಳನ್ನ ಕಾಡ್ತಾಯಿರೋದು ತಾನು ಅಮ್ಮ ಆಗೋಕಾಗ್ತಿಲ್ಲ ಅನ್ನೋ ನೋವು.

ಬುಧೇ ಪಿಸಪಿಸ ಅಂತ 'ಅಳಬೇಡ ಭಾಬಿ, ಅಮ್ಮ ಕೆಟ್ಟವಳು' ಕಿವಿಯಲ್ಲಿ ಹೇಳಿ ನೇರಳೆಹಣ್ಣು ಜಗಲಿಯಲ್ಲಿಟ್ಟು ಓಡಿಹೋದ.

ಗುಲ್ನೂರ್ ಪಕ್ಕದ ಮನೆ ನೂರ್ ಅಮ್ಮನಿಗೆ ಹೇಳ್ತಾಯಿದ್ಲು, 'ನನ್ನ ಸೊಸೆ ಬಂಜೆ ನೋಡಿದ್ಯಾ, ಇಲ್ಲಾಂದ್ರೆ ಮಕ್ಕಳಾಗಲ್ಲವಾ?'